ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 25 ॥ ಸಂಚಿಕೆ : 40 ॥ Udp/1263/2015-17 || R.NO.50495/91 ॥ ತಾರೀಕು : 20–10–2015 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ನವರಾತ್ರಿ ಸಂಭ್ರಮ



ಕೋಟೇಶ್ವರದ ಶ್ರೀ ಪಟ್ಟಾಭಿರಾಮಚಂದ್ರ ದೇವಸ್ಥಾನದಲ್ಲಿ ಶ್ರೀ ಕಾಶೀಮಠದ ಕಿರಿಯ ಯತಿ ಶ್ರೀ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರು ನವರಾತ್ರಿ ಆಚರಣೆಯಲ್ಲಿ ಪಲ್ಲಕ್ಕಿವಾಹನ ಆರೂಢ ಶ್ರೀ ವೇದವ್ಯಾಸ ದೇವರನ್ನು ಪೂಜಿಸುತ್ತಿರುವುದು.

## ಡಾ.ಬಿ.ಆರ್.ಶೆಟ್ಟಿ, ಗಿರೀಶ್ ಕಾಸರವಳ್ಳಿಯವರಿಗೆ ಯಡ್ತರೆ ಮಂಜಯ್ಯಶೆಟ್ಟಿ ಸ್ಮಾರಕ ಪ್ರಶಸ್ತಿ





ಅಬುದಾಬಿಯ ಖ್ಯಾತಉದ್ಯಮಿ ಡಾ।ಬಿ.ಆರ್.ಶೆಟ್ಟಿ ಹಾಗೂ ರಾಷ್ಟ್ರಪ್ರಶಸ್ತಿ ಪುರಸ್ಕೃತ ಕನ್ನಡ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರಿಗೆ 2015ರ ಯಡ್ತರೆ ಮಂಜಯ್ಯ ಶೆಟ್ಟಿ ಸ್ಮಾರಕ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ.

ಸಾಧನೆಗಳ ಮೂಲಕ ದೇಶ ವಿದೇಶದಲ್ಲಿ ಕರ್ನಾಟಕ್ಕೆ ಕೀರ್ತಿ ತಂದಿರುವ ಉದ್ಯಮಿ ಡಾ।ಬಿ.ಆರ್.ಶೆಟ್ಟಿ ಹಾಗೂ ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರು ಈಗಾಗಲೇ ರಾಷ್ಟ್ರಮಟ್ಟದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿ ಗೌರವಿಸಲ್ಪಟ್ಟವರಾಗಿದ್ದಾರೆ.

ಭವಗುತ್ತು ರಘುರಾಮ್ ಶೆಟ್ಟಿ ಎಂದು ಕರೆಯಲ್ಪಡುವ ಡಾ.ಬಿ.ಆರ್.ಶೆಟ್ಟಿಯವರು ಈ ಹಿಂದೆ ಉಡುಪಿ ಪುರಸಭೆಯ ಉಪಾಧ್ಯಕ್ಷರಾಗಿ ಸೇವೆಸಲ್ಲಿಸಿದ್ದರು. ಹೆಚ್ಚಿನ ಸೇವೆಯ ಗುರಿಯೊಂದಿಗೆ ಯುಎಇ ಗೆ ತೆರಳಿದ ಅವರು ಆನಂತರ ಮಾಡಿದ ಸಾಧನೆ ಅತ್ಯಪೂರ್ವವಾದುದು. ವೈದ್ಯಕೀಯ ಕ್ಷೇತ್ರ ಆರ್ಥಿಕ ಕ್ಷೇತ್ರ, ಔಷಧ ಕ್ಷೇತ್ರ, ಶಿಕ್ಷಣ ಕ್ಷೇತ್ರ ಮುಂತಾದ ಬಹುತೇಕ ಪ್ರಮುಖ ಕ್ಷೇತ್ರಗಳಲ್ಲಿ ಬಹಳ ಸಾಧನೆ ಮಾಡಿದ ಅವರು ಮಾನವೀಯ ದೃಷ್ಟಿಯಿಂದಲೂ ವಿಶ್ವಾದ ಹಲವಾರು ರಾಷ್ಟ್ರಗಳ ಜನೋಪಯೋಗಿ ಕಾರ್ಯಗಳಿಗೆ ನೆರವಾದವರು. ಪ್ರಾಕೃತಿಕ ಸಮಸ್ಯೆಗಳಿಂದ ಭಾರತವೂ ಸೇರಿದಂತೆ ಇತರರ ರಾಷ್ಟ್ರಗಳಾದ ಪ್ಯಾಲೆಸ್ಟಿನ್, ಬಾಂಗ್ಲಾದೇಶ, ಇಂಡೋನೇಷಿಯಾ, ಟರ್ಕಿ, ಶ್ರೀಲಂಕಾ, ಥೈಲ್ಯಾಂಡ್, ಮುಂತಾದ ರಾಷ್ಟ್ರಗಳಲ್ಲಿ ಜನರಿಗೆ ನೆರವಾದವರು. ಅಬುದಾಬಿಯಲ್ಲೂ ಸಹ ಅವರು ಸ್ಪೆಶಲ್ ಕೇರ್ ಸೆಂಟರನ್ನು ಪ್ರೋತ್ಸಾಹಿಸುತ್ತಿದ್ದಾರೆ. ಈಗಾಗಲೇ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಂದ ಪ್ರವಾಸಿ ಭಾರತೀಯ ಸನ್ಮಾನ, ಅಬುದಾಬಿಯಿಂದ ವಾರ್ಡರ್ ಆಫ್ ಅಬುದಾಬಿ ಗೌರವ ಹಾಗೂ ಭಾರತ ದೇಶದಿಂದ ಪ್ರತಿಷ್ಠಿತ ಪದ್ಮಶ್ರೀ ಪುರಸ್ಕಾರ ಪಡೆದಿದ್ದಾರೆ.

ಗಿರೀಶ್ ಕಾಸರವಳ್ಳಿಯವರು ಚಲನಚಿತ್ರಕ್ಷೇತ್ರದಲ್ಲಿ ಹದಿನೇಳು ಬಾರಿ ರಾಷ್ಟ್ರಪತಿಯವರ ಕಮಲ ಪ್ರಶಸ್ತಿ ಪಡೆದವರು. ಮೂಲತಃ ಕಾಸರವಳ್ಳಿಯವರಾದ ಇವರು ಮಣಿಪಾಲದಲ್ಲಿ ಬಿಫಾರ್ಮಾ ಶಿಕ್ಷಣ ಪಡೆದು ಆನಂತರ ಪುಣೆ ಫಿಲ್ಮ್ ಇನ್‌ಸ್ಟಿಟ್ಯೂಟ್ ನಲ್ಲಿ ಚಲನಚಿತ್ರ ಕ್ಷೇತ್ರದಲ್ಲಿ ಶಿಕ್ಷಣ ಪಡೆದು ಚಿನ್ನದ ಪದಕ ಪಡೆದವರು.

ದಿನಾಂಕ 26–10–2015 ರಂದು ಸಂಜೆ 4 ಗಂಟೆಗೆ ಕುಂದಾಪುರದ ಆರ್.ಎನ್.ಶೆಟ್ಟಿ ಕಲ್ಯಾಣ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲು ನಿರ್ಧರಿಸಲಾಗಿದೆ.




AXIS BANK
Main Road, Near Abharana
Kundapura
Enjoy all modern Banking Facilities
at your Doorstep
Now 24 Hours Cash Deposit Service Available.
For Free Personalized Service
Contact for BG/LC/Forex Transactions
Please Call
8095511181
08254-235601 /2 /3

